## ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

### ಸ್ಪೆಷಲ್ ಕೇಸ್ ನಂಃ 205/2023

| | ಚಾಸಾಃ 6 | ಅಸಾಃ6 |
|---|---|---|
| ಹೆಸರು | ಡಾ. ಶಶಾಂಕ್ | |
| ತಂದೆಯ ಹೆಸರು : | ರಾಜಪ್ಪ | |
| ವಯಸ್ಸು: | 47 ವರ್ಷ | |
| ಕೆಲಸಃ | ವೈದ್ಯಾಧಿಕಾರಿ ಎಸ್ ಎಸ್ ಎಂ ಆಸ್ಪತ್ರೆ, ಹಾಸನ | |
| ವಾಸಸ್ಥಳ | ಹಾಸನ | |

ದಿನಾಂಕಃ **04/11/2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ಕಳೆದ 8 ವರ್ಷದಿಂದ ಎಸ್ ಎಸ್ ಎಂ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ. 17.10.2019 ರಂದು ಬೆಳಿಗ್ಗೆ 11.45 (ದಾಖಲೆಯ ಪ್ರಕಾರ ರಾತ್ರಿ ಎಂದು ನಮೂದಾಗಿರುತ್ತದೆ ಆದರೆ ಅದು ಬೆಳಿಗ್ಗೆ) ಕ್ಕೆ ಚಾಸಾ-1 ರವರು ವಿದ್ಯುತ್ ಅಪಘಾತದಿಂದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಮೂತ್ರಪಿಂಡದ ತೀವ್ರ ತೊಂದರೆ
2. ಬಲಕೈನ ತೋಳು, ಬಲಕೈ ಮತ್ತು ಎಡಕೈನಲ್ಲಿ ವಿದ್ಯುತ್ ಒಳಪ್ರವಾಹದ ಗಾಯ
3. ಎಡಗಾಲಿನಲ್ಲಿ ವಿದ್ಯುತ್ ಹೊರ ಪ್ರವಾಹದ ಗಾಯ

ಮೇಲ್ಕಂಡ ಗಾಯಗಳು, 1ನೇ ಗಾಯ ತೀವ್ರ ಸ್ವರೂಪದಾಗಿದ್ದು, 2 ಮತ್ತು 3ನೇ ಗಾಯ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಇದಕ್ಕೆ ಸಂಬಂಧಪಟ್ಟ ಪ್ರಮಾಣಪತ್ರವನ್ನು ನೀಡಿದ್ದು, ಸದರಿ ಪ್ರಮಾಣ ಪತ್ರವನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಚಾಸಾ-1 ರವರನ್ನು ಚಿಕಿತ್ಸೆಗೆ ಆಸ್ಪತ್ರೆಗೆ ಕರೆದುಕೊಂಡು ಬಂದವರು ಯಾರು ಎಂದು ಗೊತ್ತಿಲ್ಲ. ಗಾಯದ ವಯಸ್ಸಿನ ಬಗ್ಗೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ. ಗಾಯದ ಬಣ್ಣದ ಬಗ್ಗೆ ನಮೂದನೆ ಮಾಡಿಲ್ಲ ಎಂದರೆ ಸರಿ. 50-60 ವಯಸ್ಸಿನವರಿಗೆ ಮೂತ್ರಪಿಂಡದ ಸಮಸ್ಯೆ ಇರುತ್ತದೆ ಎಂದರೆ ಸರಿಯಲ್ಲ. ಮನೆಯಲ್ಲಿ ವಿದ್ಯುತ್ ಶಾಕ್ ಆದರೂ ಕೂಡ ಮೇಲ್ಕಂಡ ಗಾಯಗಳು ಆಗುತ್ತವೆ ಎಂದರೆ ಆಗಬಹುದು.

ವಿದ್ಯುತ್ ಅಪಘಾತವಾಗಿರುವುದು ಬೆಳಿಗ್ಗೆ ಗಾಯದ ಪ್ರಮಾಣ ಪತ್ರದಲ್ಲಿ ರಾತ್ರಿ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿ ಅದು ತಪ್ಪಾಗಿ ನಮುದಾಗಿರುತ್ತದೆ, ವೈದ್ಯಕೀಯ ದಾಖಲೆಯ ಪ್ರಕಾರ ಬೆಳಿಗ್ಗೆ ಆಗಿರುತ್ತದೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ

**(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ